

ಶಾಲೆಗೆ ಪುಸ್ತಕ, ಸಮವಸ್ತ್ರ, ಪಾಟಿಚೀಲಗಳಿಗಿಂತಲೂ ಮಳೆಗಾಲದ ಚಪ್ಪಲಿ, ಕೊಡೆ, ರೇನ್ಕೋಟು ಖರೀದಿಯ ಭರಾಟೆಯೇ ಹೆಚ್ಚು. ಮೊದಲು ಹೇಳಿದ ಆ ಮೂರು ವಸ್ತುಗಳು ನೆನೆಯಬಾರದೆಂದರೆ, ಕಡೆಗಿನ ಮೂರು ವಸ್ತುಗಳು ಸರಿಯಾಗಿರಬೇಕು. ಹಸುಕೂಸಿನ ಬಳಿಯಲ್ಲೊಂದು ನಿರಂತರವಾದ ಹಾಲಿನ ವಾಸನೆಯಿದ್ದಂತೆ, ನಮ್ಮಗಳ ಮೈಯಿಂದಲೂ ಮೂರ್ನಾಲ್ಕು ತಿಂಗಳುಗಳ ಕಾಲ ನಿರಂತರವಾಗಿ ಮುಗ್ಗುಲು ವಾಸನೆ ಬರುತ್ತಿತ್ತು.

ಮಳೆಗಾಲದ ಸ್ವಾಗತದ ತಯಾರಿಯಲ್ಲೇ ಎಷ್ಟೊಂದು ಜೀವಂತಿಕೆ. ಮಾರ್ಚ್ ತಿಂಗಳಲ್ಲೇ ಇಡೀ ವರ್ಷಕ್ಕಾಗುವಷ್ಟು ದಿನಸಿ ತಂದು, ಸ್ವಚ್ಛ ಮಾಡಿ ಡಬ್ಬಿ ತುಂಬಬೇಕು. ವರ್ಷಕ್ಕಾಗುವಷ್ಟು ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಉಪ್ಪೂರಿದ ಮಾವಿನ ಕಾಯಿ, ಹಲಸಿನ ಸೊಳೆಗಳು ಸಿದ್ಧವಾಗಬೇಕು. ದಿನಸಿಗಳನ್ನು ಇಡಲೆಂದೇ ಮೊದಲೆಲ್ಲ ಹೊಗೆಅಟ್ಟವನ್ನು ನಿರ್ಮಿಸುತ್ತಿದ್ದರು. ಒಲೆಯ ಸೀದಾ ಮೇಲೆ ದೊಡ್ಡದಾದ ಅಟ್ಟವನ್ನು ಕಟ್ಟಿ, ಇಡೀ ಹೊತ್ತು ಈ ಜಾಗಕ್ಕೆ ಹೊಗೆ ಹಾಯುವಂತೆ ಮಾಡುತ್ತಿದ್ದರು. ತೀರಾ ಥಂಡಿ ಇರುವ ಈ ಪ್ರದೇಶಗಳಲ್ಲಿ ದಿನಸಿಗಳನ್ನು ಕಾಪಾಡಲು ಬಳಸುವ ವಿಧಾನವದು.

ಮಳೆಗಾಲ ಬರಲಿಕ್ಕಿದೆ ಎಂದು ಮಕ್ಕಳಾಗಿದ್ದಾಗ ನಮಗೆಲ್ಲಾ ತಿಳಿಯುತ್ತಿದ್ದುದೇ ಅಜ್ಜ, ಅಜ್ಜಿಯ ಚಟುವಟಿಕೆಗಳಿಂದ. ಗದ್ದೆಯಿಂದ ತಂದ ಹುಲ್ಲಿನ ಹೊರೆ ಇಳಿಸುವ ಹೊತ್ತಿಗೆ, 'ಅಲ್ಲಿದ್ಯನೇ, ಈ ಸಾರಿ ಮಳೆ ಲಗೂ ಕುಂದ್ರತು' ಎಂದು ಅಜ್ಜ ಹವಾಮಾನ ಮುನ್ಸೂಚನೆ ನೀಡುತ್ತಿದ್ದಂತೆಯೇ ಅಂಗಳದಲ್ಲಿ ತರಕಾರಿ ಹಿತ್ತಲು ಹಾಕುವ ಚಟುವಟಿಕೆಗಳಿಗೆ ರಂಗು. ಚಳಿಗಾಲಕ್ಕೆ ಮುನ್ನ ಪ್ರಾಣಿಗಳು ತಮ್ಮ ಬಿಲ/ಗೂಡುಗಳಲ್ಲಿ ಆಹಾರ ಶೇಖರಿಸುವಂತೆ, ಮಳೆಗಾಲಕ್ಕೆ ಮುನ್ನ ನಮ್ಮೂರಿನ ಅಜ್ಜಿ, ಅಮ್ಮ, ಅಬಚಿಯರಿಂದ ತಂತಮ್ಮ ದಾಸ್ತಾನಿನಲ್ಲಿದ್ದ ಹಿತ್ತಲು ಬೀಜಗಳ ಶೇಖರಣೆ, ವಿನಿಮಯ ಪ್ರಾರಂಭ.

'ಹರಿವೆ ಬೀಜ ಇದ್ದ? ಯಂದು ಪೂರ ಯರ ತಿಂದಿಗಿದು', ಎನ್ನುತ್ತಲೊ; 'ಬೆಂಡೆ ಬೀಜ ಇಟ್ಟಿದ್ನ ಇಲಿ ತಿಂದ್ಹಾಕ್ತು. ನಿನ್ನತ್ರ ಇದ್ರೆ ಕೊಡೆ' ಎನ್ನುತ್ತಲೊ ಮನೆಗೆ ಬರುವ ಅತ್ತಿಗೆ, ಅಕ್ಕಯ್ಯಂದಿರು ಎಷ್ಟೊ ಮಂದಿ. ಆಗೆಲ್ಲ ಕಂಪನಿಯ ಬೀಜಗಳ ಹಂಗೇ ಇಲ್ಲ... ಬೀಜ ಸಂರಕ್ಷಣೆ ಎಂತಿದ್ದರೂ ಮನೆಯ ಮಹಿಳೆಯರದ್ದೇ. ಮನೆಯ ಸುತ್ತಮುತ್ತಲ ಜಾಗದಲ್ಲೇ ಬೇಕಾದಂತೆ ಕಣ ಮಾಡಿ, ನಾನಾ ರೀತಿಯ ಸೊಪ್ಪುಗಳಿಗೆ ವ್ಯವಸ್ಥೆಯಾದರೆ, ಆಚೀಚೆ ಏರಿ ಮಾಡಿ, ಬೆಂಡೆ, ಟೊಮೆಟೊ, ಬದನೆಗಳಿಗೆ ಜಾಗ.. ಸ್ವಲ್ಪ ದೊಡ್ಡ ಜಾಗದಲ್ಲಿ, ತೊಂಡೆ, ಅಲಸಂದೆ, ಮತ್ತ್ಯವರೆ, ಹೀರೆಯಂಥ ತರಕಾರಿಗಳಿಗೆ ಚಪ್ಪರ. ಮನೆಯ ಹೆಂಗಸರಿಗೆಲ್ಲಾ ಈ ಕೆಲಸಗಳಾದರೆ, ಗಂಡಸರು ತೋಟದ ಕಡೆ. ನಾವೂ ಏನು ಖಾಲಿ ಕೂರುತ್ತಿರಲಿಲ್ಲ, ಮಳೆಗಾಲಕ್ಕೆ ಇರಲಿ ಎಂದು ಒಂದಿಷ್ಟು ಗೇರುಬೀಜ, ಹಲಸಿನ ಬೀಜಗಳನ್ನು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆವು.

ನಮ್ಮ ಕಟ್ಟೆಮನೆಯಲ್ಲಂತೂ ಜೋರು ಮಳೆ ಬಂದರೆ ಪಕ್ಕದಲ್ಲಿ ನಿಂತವರೊಂದಿಗೂ ಕಿರುಚಿಯೇ ಮಾತಾಡಬೇಕು. ಒಂದು ಬದಿಗೆ ಬೆಟ್ಟ, ಇನ್ನೊಂದು ಕಡೆ ತಗ್ಗಿನಲ್ಲಿ ತೋಟ. ಮನೆಗೆ ಅಂಟಿಕೊಂಡಂತೆ ಸುತ್ತಲೂ ಇರುವ ಹಸಿರು ಎಲೆಗಳ ಮೇಲೆ ಜೋರೆಂದು ಬೀಳುವ ಜಲಧಾರೆ ಸದ್ದು ಕಿವಿ ಕಿವುಡಾಗುವಷ್ಟು. ಇದಿಷ್ಟರ ನಡುವೆ ಎದೆ ಝಲ್ಲೆನಿಸುವ ಗುಡುಗು–ಸಿಡಿಲು, ಎಂಥಾ ಕಗ್ಗತ್ತಲೆಯನ್ನೂ ಬೆಳಗುವಂಥ ಮಿಂಚು. ಮಳೆಯೊಂದಿಗೆ ಈ ಸಹವರ್ತಿಗಳ ಆಗಮನ ತೀರಾ ತೊಂದರೆ ಕೊಡುತ್ತಿದ್ದುದು ನನ್ನಜ್ಜಿಗೆ. ಒಂದೊಂದು ಬಾರಿ ಆಕಾಶ ಮೊಳಗುತ್ತಿದ್ದಂತೆಯೂ, ತಲೆಗೊಂದು ಮಫ್ಲರ್ ಬಿಗಿದು, ಮನೆಯ ಮಧ್ಯದಲ್ಲಿದ್ದ ದೇವರ ಕೋಣೆಯಲ್ಲಿಯೇ ಕಂಬಳಿ ಹೊದ್ದು ಮಲಗಿಬಿಡುತ್ತಿದ್ದರು, ರಾಮನಾಮ ಜಪಿಸುತ್ತಾ! ಗುಡುಗು ಜೋರಾಗುತ್ತಿದ್ದಂತೆಯೇ ಅವರ ನಡುಗುವ ಧ್ವನಿಯ ತಾರಕ ಮಂತ್ರವೂ ತಾರಕಕ್ಕೇರಿ, ನಮಗೆಲ್ಲ ಭರಪೂರ ರಂಜನೆ. ಇನ್ನು ಅಜ್ಜನಿಗೆ ಅವೆಲ್ಲ ಸಮಸ್ಯೆಯಿಲ್ಲ. ಎಷ್ಟು ಗುಡುಗಿದರೂ ಅವರದಕ್ಕೆ ಪ್ರತಿಕ್ರಿಯೆಯನ್ನೂ ತೋರುತ್ತಿರಲಿಲ್ಲ, ಕಿವಿ ದೂರ!

ಒಮ್ಮೆ ಹೀಗಾಯ್ತು. ಆಕಾಶ ತೂತು ಬಿದ್ದಂತೆ ಮಳೆ ಆರ್ಭಟಿಸುತ್ತಿದ್ದ ಒಂದು ರಾತ್ರಿ. ಜಗುಲಿಯ ಮಂಚದ ಮೇಲೆ ಮಲಗಿದ್ದ ಅಜ್ಜ ಎದ್ದು ಬಚ್ಚಲಿಗೆ ಹೋಗಿದ್ದರು. ಪ್ರಕೃತಿ ಕರೆಗೆ ಎಷ್ಟೇ ಅವಸರವಾಗಿದ್ದರೂ ಎದ್ದು ಹೋಗಲಾರದಂಥ ಮಳೆ ಅವತ್ತು. ಕಂಬಳಿಯಿಂದ ಹೊರಗೆ ಬರುವುದನ್ನು ನೆನಪಿಸಿಕೊಂಡರೇ ಹೊಟ್ಟೆಯಿಂದ ನಡುಕ ಏಳುವಂಥ ಚಳಿ. ಆದರೆ ಜಗುಲಿಯ ಇನ್ನೊಂದು ಪಕ್ಕದಲ್ಲಿ ಮಲಗಿದ್ದ ನಮ್ಮಲ್ಲೊಬ್ಬ ಪೋರನಿಗೆ ಅಜ್ಜ ಮರಳಿ ಬರುವುದರೊಳಗೆ ತಾನೂ ಹೋಗಿ ಬಂದುಬಿಡಬಹುದೆಂಬ ಯೋಚನೆ ಬಂತು. ಛಂಗನೆದ್ದು ಓಡಿದ್ದ ರವಿ. ಈತ ಹೊರಗೆ ಹೋದ ವಿಷಯ ತಿಳಿಯದ ಅಜ್ಜ, ಒಳಗೆ ಬಂದವರೇ ಬಾಗಿಲು ಜಡಿದು ಕಂಬಳಿ ಹೊದ್ದು ಮಲಗಿಬಿಟ್ಟರು! ಗುಡುಗೇ ಕೇಳದ ಕಿವಿಗೆ ಹುಡುಗನ ಕೂಗು ಕೇಳೀತೆ? ಚಳಿ ತಡೆಯಲಾರದೆ ಎರಡ್ಮೂರು ಕಂಬಳಿ ಹೊದ್ದು ಮಲಗಿದ್ದ ಮನೆಮಂದಿಗಾದರೂ ಈ ಪೋರನ ಕೂಗು ಎಲ್ಲಿ ಕೇಳಬೇಕು? ಅದೂ ಆ ಮಳೆಯ ಶಬ್ದದಲ್ಲಿ! ಅಂತೂ ಬೆಳಗಿನ ಜಾವ ನಾಲ್ಕು ಗಂಟೆಗೆ ಅಜ್ಜಿ ಎದ್ದು ಹೊರಗೆ ಬಂದಾಗಲೇ ಅವನಿಗೆ ಚಳಿ–ನಡುಕದಿಂದ ಮುಕ್ತಿ. ಪಾಪ, ಥಂಡಿ–ಜ್ವರದಿಂದ ಚೇತರಿಸಿಕೊಳ್ಳಲು ಅವನಿಗೆ ನಾಲ್ಕಾರು ದಿನಗಳೇ ಬೇಕಾದವು.

ಮಳೆಯೆಂದರೆ ಎಲ್ಲವೂ ಒಂದೇ ರೀತಿಯದ್ದಲ್ಲ. ನಮ್ಮಲ್ಲಿ ಒಂದೊಂದು ಮಳೆ ನಕ್ಷತ್ರಕ್ಕೂ ಅದರದ್ದೇ ಆದ ಪ್ರಾಮುಖ್ಯತೆ ಉಂಟು. ಮಳೆಗೆ ಸಂಬಂಧಿಸಿದಂತೆ ಜನಪದರಲ್ಲಿ ಇರುವುದು ಬರೀ ನಂಬಿಕೆಗಳಲ್ಲ, ಜೀವನಾನುಭವಗಳು. ಉದಾಹರಣೆಗೆ, ಭರಣಿ ಮಳೆ ಬಂದ್ರೆ ಧರಣಿಯೆಲ್ಲಾ ಬೆಳೆ; ಮೃಗಶಿರ ಮಳೆಯಲ್ಲಿ ಮುರಿದು ನೆಟ್ಟರೂ ಬದುಕೀತು, ಪುಷ್ಯ– ಪುನರ್ವಸು ಮಳೆಯಲ್ಲಿ ಕೆರೆ–ಕಟ್ಟೆ ಪೂರ್ತಿ, ಆರದೆ ಸುರಿಯೋದೆ ಆರಿದ್ರೆ ಮಳೆ, ಚಿತ್ತೆ ಮಳೆಯಲ್ಲಿ ಗಿಡದಲ್ಲೆಲ್ಲಾ ಚಿತ್ತಾರ (ಕೀಟಬಾಧೆ ಎನ್ನುವುದಕ್ಕೆ), ಮಘೆ ಮಳೆಯಲ್ಲಿ ಮೈನಡುಗೋ ಚಳಿ, ಕಂಡಕಂಡಲ್ಲಿ ಸುರಿಯೋದು ಕನ್ಯಾ ತಿಂಗಳ ಮಳೆ (ಚೆದುರಿದಂತೆ ಮಳೆ)... ಇಂಥವು. ಹಿಂದೆಲ್ಲಾ ಮಳೆಗಾಲದಲ್ಲಿ ಮದುವೆ ಎಂದರೆ ತೀರಾ ರಾಡಿಯ ವಿಷಯ. ಹಾಗಿರುವಾಗ ಹನಿ ಕಡಿಯದೆ ಸುರಿಯುವ ಆದ್ರ್ರಾ ಮಳೆಯಲ್ಲೂ ದಿಬ್ಬಣ ತಂದು ಮದುವೆಯಾದ ಭಪ್ಪರೆ ಗಂಡುಗಳಿಗಾಗಿ, ಆರಿದ್ರೆಯಲ್ಲಾದವನೆ ಗಂಡ ಎಂಬ ನಾಣ್ನುಡಿಯೂ ಇದೆ.

ಮಲೆನಾಡಿನಲ್ಲಿ ಅಡಿಗಡಿಗೂ ಸಣ್ಣ ತೊರೆ ಹಳ್ಳಗಳು ಸಿಗುತ್ತವೆ. ನೀರಾಟಕ್ಕೆ ಇವು ಅನುಕೂಲಕರವಾಗಿದ್ದರೂ ಮಳೆಗಾಲದಲ್ಲಿ ಮಾತ್ರ ಪೇಚಾಟ ತರುತ್ತವೆ. ಮನೆಯಿಂದ ಹೊರಗೆ ಹೊರಡುವಾಗ ಇಲ್ಲದ ಮಳೆ, ಹಿಂದಿರುಗಿ ಬರುವಾಗ ದಬಾಯಿಸಿ ಜಡಿದು, ಮನೆಗೆ ಸಮೀಪದಲ್ಲಿ ಮೊರೆಯುವ ಹಳ್ಳ ದಾಟಲಾರದೆ ಆಚೆ ದಡದ ನೆಂಟರ ಮನೆಯಲ್ಲಿ ರಾತ್ರಿ ಕಳೆದವರ ಕಥೆಗಳು ಬೇಕಷ್ಟಿವೆ. ಹಾಗೆಂದೇ 'ಹಳ್ಳದ ಹೆಣ ಕಾಯುವ' ನಾಯಿಗುತ್ತಿ ಯಂಥವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹೊರಗೂ ನಮಗೆ ಕಾಣಸಿಗುತ್ತಾರೆ!

ನೆಂಟರ ಮನೆಯ ವಿಶೇಷವೊಂದಕ್ಕೆ ಹೋದ ನಾವೊಮ್ಮೆ ಮರಳಿ ಮನೆಗೆ ಹೊರಟಿದ್ದೆವು. ಚಿಕ್ಕಪ್ಪ ಮತ್ತು ನಾನು ಬೈಕಿನಲ್ಲಿ ಹೊರಟ ಹತ್ತೇ ನಿಮಿಷಕ್ಕೆ ಮಳೆ ಶುರುವಾಯ್ತು. ಹೋಗಿ ತಲುಪುವ ದಾರಿ ದೂರವಿತ್ತಾದ್ದರಿಂದ ನಿಲ್ಲದೆ ಮುಂದುವರಿದೆವು. ದೇವರೆ! ನಾವು ಜೀವಮಾನದಲ್ಲೇ ಕಾಣದಂಥ ಮಳೆ ಜಡಿಯಿತಂದು. ಗುಡ್ಡ–ಬೆಟ್ಟಗಳಿಂದ ಕೂಡಿದ ಭೂಮಿಯಾದ್ದರಿಂದ, ಊರಲ್ಲಿ ಎಷ್ಟೇ ಮಳೆ ಹೊಡೆದರೂ ನೀರು ಎಲ್ಲಿಯೂ ನಿಲ್ಲದೆ ಹರಿದು ಹೋಗಿಬಿಡುತ್ತದೆ. ಆದರೆ ಆವತ್ತು ಮಾತ್ರ ಬೆಂಗಳೂರಿನ ರಸ್ತೆಗಳೆಲ್ಲಾ ನಮ್ಮಲ್ಲಿಗೆ ಆವಾಹನೆ ಆದಂತೆ ನೀರೋ ನೀರು. ಇನ್ನಿಲ್ಲದಂಥ ಗಾಳಿ. ಮುಂದುವರಿಯುವುದಕ್ಕೆ ಸಾಧ್ಯವೇ ಇಲ್ಲ ಎನ್ನುವಾಗ ಸಮೀಪದ ಬಸ್ ನಿಲ್ದಾಣದಲ್ಲಿ ನಿಂತೆವು.

ನಮ್ಮ ಮುಂದಿನ ಜಗತ್ತೆಲ್ಲಾ ಕೆಲವೇ ಕೆಲವು ಎಲೆಗಳ ರೂಪದಲ್ಲಿ ರಾಕೆಟ್ ವೇಗದಲ್ಲಿ ಪರಿಭ್ರಮಿಸುವಂತೆ ಭಾಸವಾಗುತ್ತಿತ್ತು. ಸಾವಿರಾರು ಕುಕ್ಕರ್‌ಗಳು ಒಟ್ಟಿಗೆ ಕೂಗಿದಂತಹ ಪ್ರಚಂಡ ಅಬ್ಬರದ ಗಾಳಿಯೊಂದಿಗೆ ಮಳೆಯ ಸ್ಪರ್ಧೆ. ಹುಟ್ಟಿದಾರಭ್ಯ ಮಳೆಯೊಂದಿಗೇ ಬದುಕಿದ ಚಿಕ್ಕಪ್ಪನಿಗೂ ಗಾಬರಿ ಹುಟ್ಟಿಸಿದಂಥ ಸುಳಿಗಾಳಿ, ನಮ್ಮ ತಲೆಯ ಮೇಲಿದ್ದ ಕಾಂಕ್ರೀಟಿನ ಸೂರನ್ನು ನಿರಾಯಾಸವಾಗಿ ಅಲ್ಲಾಡಿಸುತ್ತಿತ್ತು. ಸೂರಿನ ಕೆಳಗಿರುವಂತೆಯೂ ಇಲ್ಲ, ಹೊರಬರುವಂತೆಯೂ ಇಲ್ಲ. ನಮ್ಮ ಬದುಕೆಷ್ಟು ನಶ್ವರ ಎಂಬ ಪಾಠವನ್ನು ಆ ಹೊತ್ತು ಪ್ರಕೃತಿ ಕೆಲವೇ ನಿಮಿಷಗಳಲ್ಲಿ ನಮಗೆ ಬೋಧಿಸಿತ್ತು. ಎರಡು ಗಂಟೆಗಳ ಕಾಲ ಒಂದೇಸಮ ಅಬ್ಬರಿದ ಮಳೆ ಶಾಂತವಾದ ಮೇಲೆ, ನಾವೆಲ್ಲಿದ್ದೇವೆ, ಅದು ಯಾವೂರು ಎಂಬ ತಿಳಿವು ಬರಲು ಹಲವು ನಿಮಿಷಗಳೇ ಹಿಡಿದವು!

ಮಳೆಯ ಪಟ್ಟ ಬಿಚ್ಚಿದರೆ ಮುಗಿಯದಷ್ಟು ಕಥೆಗಳು. ಅದೆಷ್ಟು ವರ್ಷ ಸತತವಾಗಿ ಮನದೊಳಗೆ ಸುರಿದಿದೆಯೋ ಎಂಬಂತೆ. ಅಂತೂ 'ಮಳೆ' ಅಂದೊಡನೆ ಮನ ಹಸಿಯಾಗುತ್ತದೆ. ಹಿಂಡಿದರೆ ನೀರಿಳಿಯುವಷ್ಟು, ಬಿತ್ತಿದರೆ ಚಿಗುರೊಡೆಯುವಷ್ಟು.